

ಶಶಿಧರ್ ಹಳೇಮನಿ

# ರೇಡಿಯೊ

ನನಗೆ ತಿಳಿದ ಮಟ್ಟಿಗೆ  ನಮ್ಮದ್ದು
ಭವ್ಯ ಬಾನುಲಿ ಪೆಟ್ಟಿಗೆ
ಹಾಡನ್ನು ನಿಲ್ಲಿಸಿದರೂ ಒಟ್ಟಿಗೆ ಮತ್ತೆ
ಶುರುವಾಗುವುದು ಒಂದೇ ತಟ್ಟಿಗೆ

ಅಂದದ ಚಂದದ ರೇಡಿಯೊವಿದು ತುಂಬಾ
ಹಳೆಯದಾದರೂ ದುರಸ್ತಿ ಆಗದು.
ವಾರ್ತೆ, ಚಿತ್ರಗೀತೆ, ಹವಾಮಾನ ವರದಿ
ನೀಡಿ ಪಡೆಯುವುದು ನಮ್ಮಭಿಮಾನ

ಕ್ರೀಡೆ, ಚಿತ್ರಗೀತೆ, ಯುವವಾಣಿ ಇವೆಲ್ಲ
ಪ್ರಸಾರ ಮಾಡುವುದೇ ಆಕಾಶವಾಣಿ.
ವಂದೇಮಾತರಂನೊಡನೆ ದಿನವ ಆರಂಭಿಸಿ ವಿಭಿನ್ನ
ಕಾರ್ಯಕ್ರಮ ನೀಡುವ ಮಾರ್ಗದರ್ಶಿ

ಇಂದಿನ ಯುವಕರ ಆಕರ್ಷಣೆ ಇದುವೇ
ಎಫ್.ಎಂ. ರೇಡಿಯೊ ಸಾಧನೆ.
ಟಿ.ವಿ. ವೀಕ್ಷಣೆಯಂತೆ ಇಲ್ಲವಿದು ರೇಡಿಯೊ
ಕೇಳಿಸಿಕೊಂಡೇ ಕೆಲಸವೂ ಸಲ್ಲುವುದು

ರೇಡಿಯೊ ಕೇಳಿ ಕಳೆಯೋಣ ಗಳಿಗೆ ಇಲ್ಲಿದೆ
ಕಾರ್ಯಕ್ರಮ, ವಿದ್ಯಾರ್ಥಿಗೆ, ರೈತರಿಗೆ.
ಚಂಡಮಾರುತದ ಸಮಯ ಮುನ್ನೆಚ್ಚರಿಕೆ ನೀಡಿ
ಮೀನುಗಾರರ ಕಾಪಾಡೋದು ವಾಡಿಕೆ

ಮೂರೋ ನಾಲ್ಕೋ ಸೆಲ್ಲನ್ನು ಹಾಕಿ
ಮುಚ್ಚಿ ತಿರುಗಿಸಿದರೆ ಮುಳ್ಳನ್ನು
ನೂರಾರು ಮಾಹಿತಿ ನೀಡುವ ಸಂಗಾತಿ ಬಾನುಲಿ
ಕೇಳಿ ಪಡೆಯೋಣ ನೆಮ್ಮದಿ

ಮನೆಯಲ್ಲಿ, ಹೋಟೆಲಲ್ಲಿ, ಉದ್ಯಾನವನದಲ್ಲಿ ಕೇಳುತ್ತಿದ್ದ
ಬಾನುಲಿ ಪೆಟ್ಟಿಗೆ ಈಗೆಲ್ಲಿ?
ಪೋಷಕರೇ ಇಂದೇ ಒಂದನ್ನು ಕೊಡಿಸಿ ನಿಮ್ಮ
ಮಕ್ಕಳ ಅರಿವನ್ನು ಬೆಳೆಸಿ

■ ಡಾ. ವಿ. ಪುಗಳೇಂದಿ, ಬಳ್ಳಾರಿ